ಸ್ವತಃ ನಾನೇ ಹೋಗಿ ಈ ಸೇತುವೆಯನ್ನು ನೋಡಿ ಬಂದಿದ್ದೇನೆ. ಈ ಕೆಲಸವನ್ನು ಆ ಸಂಸ್ಥೆಗೆ ವಹಿಸಿಕೊಟ್ಟು ಮುಗಿಸುತ್ತೇವೆ.

ಕರ್ನಾಟಕದಲ್ಲಿ ಹೊಸ ಜಿಲ್ಲೆಗಳ ರಚನೆ

ಶ್ರೀ ಡಿ.ಆರ್. ಪಾಟೀಲ್ (ಗದಗ) : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಹೊಸ ಜಿಲ್ಲೆಗಳನ್ನು ಉದ್ಘಾಟಿಸುವುದರ ಬಗ್ಗೆ ಪತ್ರಿಕೆಗಳಲ್ಲಿ ಈಗಾಗಲೇ ವರದಿಯಾಗಿದೆ. ಹೊಸ ಜಿಲ್ಲೆಗಳನ್ನು ರಚನೆ ಮಾಡುವ ಬಗ್ಗೆ ಸರ್ಕಾರದವರು ಈಗಾಗಲೇ ಡ್ರಾಫ್ಟ್ ನೋಟಿಫಿಕೇಶನ್ ಇಶ್ಯೂ ಮಾಡಿದ್ದು, ಈ ಡ್ರಾಫ್ಟ್ ನೋಟಿಫಿಕೇಶನ್ ಅನ್ನು ನೀವು ಹಾಗೆಯೇ ಅಕ್ಸೆಪ್ಟ್ ಮಾಡಿದರೆ ಪರವಾಗಿಲ್ಲ ಆದರೆ, ಅದರಲ್ಲಿ ಏನಾದರೂ ಬದಲಾವಣೆ ಮಾಡುವ ವಿಚಾರವಿದ್ದರೆ ಹೊಸ ಜಿಲ್ಲೆಗಳಿಗೆ ಸಂಬಂಧಿಸಿದ ಜನ ಪ್ರತಿನಿಧಿಗಳ ಜೊತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಕುರಿತ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮವಾದ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರದಲ್ಲಿ ಸಂಬಂಧಪಟ್ಟ ಎಲ್ಲರ ಜೊತೆಯೂ ಮಾತನಾಡಿದ್ದು, ನಿನ್ನೆ ಕೂಡ ತಮಗೆ ಈ ವಿಚಾರ ತಿಳಿಸಿದ್ದು, ಈ ತಿಂಗಳ 24ನೇ ತಾರೀಖಿನಂದು ಒಂದೂವರೆ ಗಂಟೆ ಸುಮಾರಿಗೆ ಗದಗ ಜಿಲ್ಲೆಯ ಉದ್ಘಾಟನಾ ಪ್ರಾರಂಭೋತ್ಸವವಿದ್ದು, ಸದರಿ ಕಾರ್ಯಕ್ರಮದಲ್ಲೇನಾದರೂ ಅಥವಾ ಅಧಿಸೂಚನೆಯಲ್ಲಿ ಏನಾದರೂ ಬದಲಾವಣೆಗಳನ್ನು ಮಾಡುವುದಾಗಿದ್ದರೆ ಜನಪ್ರತಿನಿಧಿಗಳನ್ನು ಕರೆಸಿ ಅವರೊಂದಿಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ದಾವಣಗೆರೆಯಲ್ಲಿ ಶ್ರೀ ಶ್ಯಾಮನೂರು ಶಿವಶಂಕರಪ್ಪನವರಿಗೆ ಸೇರಿದ ಉದ್ಯಮಗಳನ್ನು ಸೀಜ್ ಮಾಡಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ನಿನ್ನೆ ಸದನದಲ್ಲಿ ನಮ್ಮ ಪಕ್ಷದವರಾದಿಯಾಗಿ ಜೊತೆಯಲ್ಲಿ ಎಲ್ಲಾ ವಿರೋಧ ಪಕ್ಷಗಳವರು ಸೇರಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ವಿದ್ಯುತ್ ದರವನ್ನು ಏರಿಸಿದ ಬಗ್ಗೆ ಪ್ರತಿಭಟಿಸಿ ಹೋರಾಟ ಪ್ರಾರಂಭಿಸಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ, ಕೆ.ಇ.ಬಿಯವರು ಅನೇಕ ಸುಧಾರಣೆಗಳನ್ನು ಮಾಡಬೇಕೆಂದು ಅಥವಾ ಆಗುತ್ತಿರುವ ವಿದ್ಯುತ್ ಕಳ್ಳತನಗಳನ್ನು ಕಂಡು ಹಿಡಿಯುವ ಸಲುವಾಗಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆಂದು ಹೇಳಿದರು. ಆದರೆ, ನನಗೆ ಈಗಾಗಲೇ ಗೊತ್ತಾಗಿರುವಂತೆ, ಒಂದು ವಿಂಡಿಕ್ಟಿವ್ ಆ್ಯಟಿಟ್ಯೂಡ್ ಇಟ್ಟುಕೊಂಡು ಬೆಂಗಳೂರಿನಲ್ಲಿರುವ ಕೆಲವು ಕೆ.ಇ.ಬಿ. ಅಧಿಕಾರಿಗಳ ಮುಖಾಂತರ ಈ ಸದನದ ಒಬ್ಬ ಸದಸ್ಯರಾಗಿರುವ ಶ್ರೀಮಾನ್ ಶ್ಯಾಮನೂರು ಶಿವಶಂಕರಪ್ಪನವರಿಗೆ ಸೇರಿರುವ ದಾವಣಗೆರೆಯಲ್ಲಿರುವ ಅವರ ಕೈಗಾರಿಕೆಗಳ ಮೇಲೆ ನಿನ್ನೆ ರಾತ್ರಿ 15 ಜೀಪ್‌ಗಳಲ್ಲಿ15 ಜನ ಪೋಲೀಸರು ಹಾಗೂ ಇನ್ನಿತರ 48 ಸಿಬ್ಬಂದಿ ವರ್ಗದವರೊಡನೆ

ಏಕಕಾಲಕ್ಕೆ ದಾಳಿ ನಡೆಸಿ, ಮಾಲೀಕರು ಕಳ್ಳತನ ಮಾಡಿದ್ದಾರೇನೋ ಅಥವಾ ಅವರೊಬ್ಬ ಕಳ್ಳರು ಎನ್ನುವ ರೀತಿಯಲ್ಲಿ ಅವರಿಗೆ ಸೇರಿರುವ ಎಲ್ಲಾ ಉದ್ಯಮಗಳನ್ನೂ ಕೂಡ ಸೀಜ್‌ಮಾಡಿದ್ದಾರೆ. ಸೀಜ್ ಮಾಡುವಾಗ ಅಧಿಕಾರಿಗಳ ಜೊತೆ ಚವಾಣ್ ಎನ್ನುವವರೂ ಸಹ ಹೋಗಿದ್ದಾರೆಂದು ನಾನು ಕೇಳಿದ್ದೇನೆ. ಅವರ ಉದ್ಯಮಗಳನ್ನು ಸೀಜ್ ಮಾಡುವಾಗ ಮಾಲೀಕರ ಮಕ್ಕಳಿಲ್ಲರೂ ಇದರಲ್ಲೇನಾದರೂ ತಪ್ಪಿದ್ದರೆ ಮಾತ್ರ ನೀವು ನೋಡಿ ಎಂದು ಎಲ್ಲರೂ ಕೇಳಿಕೊಂಡರೂ ನಮಗೆ ಬೆಂಗಳೂರಿನಿಂದ ಆದೇಶ ಬಂದಿದೆ, ಅದಕ್ಕೋಸ್ಕರ ನಾವು ಈ ಕೆಲಸ ಮಾಡುತ್ತಿದ್ದೇವೆ. ಇಡೀ ದಾವಣಗೆರೆಯಲ್ಲಿರುವ ಎಲ್ಲಾ ಉದ್ಯಮಗಳ ಮೇಲೂ ಸಾರಾಸಗಟಾಗಿ ಧಾಳಿ ನಡೆಸಿದರೆ ಯಾರಿಗೂ ನೋವಾಗುವುದಿಲ್ಲ. ನಿಮ್ಮಲ್ಲಿ ವಿಜಿಲೆನ್ಸ್ ಇದ್ದು, ಈ ದಿಶೆಯಲ್ಲಿ ಕಾಂಗ್ರೆಸ್ ಪಕ್ಷದವರಿರಲಿ. ಬಿ.ಜೆ.ಪಿ. ಯವರಿರಲಿ, ಜನತಾ ದಳವಿರಲಿ ಅಥವಾ ಯಾವುದೇ ಬೇರೆ ಪಕ್ಷವಿರಲಿ ಸಂಬಂಧವಿಲ್ಲ, irrespective of that he is a class himself, ಪಿಲ್‌ಫರೇಜ್ ಕಂಡುಹಿಡಿಯಬೇಕು ಅಥವಾ ಅಲ್ಲಿ ಆಗುತ್ತಿರುವ ಕಳ್ಳತನ ಕಂಡುಹಿಡಿಯಬೇಕೆಂಬ ದೃಷ್ಟಿಯಿಂದ ನಾವು ಧಾಳಿ ನಡೆಸಿದ್ದೇವೆಂದರೆ ನಾನು ಒಪ್ಪುತ್ತೇನೆ. ಆದರೆ, ಧಾಳಿ ನಡೆಸಿರುವ ಉದ್ಯಮದ ಮಾಲೀಕರು ಒಬ್ಬ ಶಾಸಕರಾಗಿದ್ದು ಅವರಿಗೂ ಮತ್ತು ಈ ಸರ್ಕಾರಕ್ಕೂ ಕೆಲವು ವಿಷಯಗಳಲ್ಲಿ ವ್ಯತ್ಯಾಸ ಬಂದಿದೆಯೆಂದು ತಿಳಿದುಕೊಂಡು ನೀವು ಒಂದು ರೀತಿಯ ವಿಂಡಿಕ್ಟಿವ್ ಆಟಿಟ್ಯೂಡ್ ಇಟ್ಟುಕೊಂಡು ಈ ಕೆಲಸ ಮಾಡಿದ್ದರೆ ನಾನು ಹೇಳುತ್ತೇನೆ. ಈ ಸದನದಲ್ಲಿ ಸದಸ್ಯರಾಗಿರುವವರು ಅವರು ಯಾವುದೇ ಪಕ್ಷದವರಿರಲಿ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವುದಕ್ಕಾಗುವುದಿಲ್ಲವೆನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಅವರು ಹೇಗೆ ಅಲ್ಲಿಗೆ ಹೋದರು? ಯಾವ ಆಧಾರದ ಮೇಲೆ ಬರೀ ಅವರ ಉದ್ಯಮಗಳ ಮೇಲೆ ಧಾಳಿ ಮಾಡಬೇಕೆಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಿ? ಅದರಲ್ಲೂ ಈ ಸಂಬಂಧವಾಗಿ ಖಾತೆಯನ್ನು ಮಾನ್ಯ ಮುಖ್ಯಮಂತ್ರಿಗಳವರೇ ವಹಿಸಿಕೊಂಡಿದ್ದು, ಮುಖ್ಯಮಂತ್ರಿಗಳ ಗಮನಕ್ಕೆ ಬಾರದಂತೆ ಅವರು ಹೇಗೆ ಅಲ್ಲಿಗೆ ಹೋಗುತ್ತಾರೆ? This is very unfortunate and I have to tell and any of his relatives interfering with this, definitely, this is going to happen a very bad precedent and everybody will act like this.

SRI J.H. PATEL : Absolutely no basis for any prejudicial action. If the local officers have acted I have no idea, I will get the information. If there is some excess behaviour on the part of the department or our Board,ಅಥವಾ ನಿಜವಾಗಿಯೂ ತಪ್ಪಿದ್ದರೆ ಖರ್ಗೆಯವರೇಕೆ ವಕಾಲತ್ತು ವಹಿಸಬೇಕು? ಇದು ನನಗಂತೂ ಗೊತ್ತಿಲ್ಲ. ಖರ್ಗೆಯವರು ಯಾರಿಗೆ ವಕಾಲತ್ತು ವಹಿಸುತ್ತಾರೋ ಅವರು ನನಗೆ ಬಹಳ ಚೆನ್ನಾಗಿ ಗೊತ್ತು. ಸುಮ್ಮನೆ ಏಕೆ ಹೀಗೆ ಹೇಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರ ವಕಾಲತ್ತು ವಹಿಸುವ ಪ್ರಶ್ನೆಯೇ ಇಲ್ಲ. ಬೆಂಗಳೂರಿನಲ್ಲಿರುವ ನಿಮ್ಮ ಮನೆಯಿಂದ ಇನ್‌ಸ್ಟ್ರಕ್ಷನ್ ಹೋಗಿದ್ದರೆ ನಾವು ಹೇಳುತ್ತಿದ್ದೆವು. ನೀವು ಪಿಕ್ ಅಂಡ್ ಚೂಸ್ ಏನು ಮಾಡುತ್ತಿದ್ದೀರಲ್ಲಾ, ಆ ರೀತಿ ಮಾಡಿದ್ದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.I have

to tell that your relatives have directed them jeeps have gone, people have gone from Bangalore. This is my challenge..... ಯಾರು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ? ಯಾರಿಗೆ ಮಾತನಾಡಿದ್ದಾರೆಂದು ಬೇಕಾದರೆ ನಾನು ಪ್ರೂವ್ ಮಾಡುತ್ತೇನೆ.

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್ : ಹುಡುಗಾಟಿಕೆ ಮಡುತ್ತಿದ್ದೀರಾ? ನನಗೆ ಆ ಕುರಿತು ಗೊತ್ತಿಲ್ಲ, ವಿಷಯ ತರಿಸಿಕೊಳ್ಳುತ್ತೇನೆಂದು ಹೇಳಿದರೆ, ನಿಮ್ಮ ರಿಲೇಟಿವ್ ಇರಬಹುದೆಂದರೆ ಏನರ್ಥ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅನ್ಯಾಯವಾದರೆ ನಾನೂ ಕೂಡ ವಕಾಲತ್ತು ವಹಿಸಿಕೊಳ್ಳಬೇಕಾಗುತ್ತದೆ..... I will do it for 100 times.....

SRI P.G.R. SINDHIA : You may tell ....

SRI M.P. PRAKASH : There should be basis for that.....

(INTERRUPTION)

ಅಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದ್ದೇನೆಂದರೆ, ಅವರು ಹೇಳುವಾಗ ತಮ್ಮ ಪಾಯ್ಸ್ ಅನ್ನು ಸ್ಲೋ ಡೌನ್ ಮಾಡಿದ್ದರಿಂದ ತಮಗೆ ಅರ್ಥವಾಗಲಿಲ್ಲ. ನೀವು ಯಾರಿಗೆ ವಕಾಲತ್ತು ಹಾಕುತ್ತಿದ್ದೀರೋ ಅವರು ನನಗೆ ಬಹಳ ಆತ್ಮೀಯರು ಎಂದು ಹೇಳಿದರು. I am equally interested in Shyamanur Shivashankarappa, ಅಲ್ಲದೆ, ಇದು ನನಗೆ ಗೊತ್ತಿಲ್ಲ, ಆ ಕುರಿತು ಮಾಹಿತಿ ತರಿಸಿಕೊಳ್ಳುತ್ತೇನೆಂದು ಹೇಳಿದರು. ರಾಜಕಾರಣದಲ್ಲಿ ಕೆಲವೊಮ್ಮೆ ಏನಾಗುತ್ತದೆಂದರೆ ತಮ್ಮ ಹಾಗೂ ನಮ್ಮ ಅನುಭವದಂತೆ ಮುಖ್ಯಮಂತ್ರಿಗಳಾದವರು ಅವರ ಪಾಡಿಗೆ ಅವರು ಸುಮ್ಮನಿದ್ದರೂ ಇನ್ನು ಕೆಲವರು ಅವರ ಸೂಪರ್ ಚೀಫ್ ಮಿನಿಸ್ಟರ್‌ಗಳಾಗಿರುತ್ತಾರೆ, ಇದು ಮುಖ್ಯಮಂತ್ರಿಗಳಾಗಿರುವವರ ಗಮನಕ್ಕೆ ಬಂದಿರುವುದಿಲ್ಲ. ಒಂದು ವೇಳ ಆ ತರಹ ಆಗಿದ್ದರೆ he will try to take care of those things.... ಈಗ ಸದನದಲ್ಲಿ ಶ್ಯಾಮನೂರು ಶಿವಶಂಕರಪ್ಪ ಇರುವುದರಿಂದ ಈ ಕುರಿತು ಅವರೇನಾದರೂ ಹೇಳುವುದಿದ್ದರೆ ಹೇಳಲಿ. Because concerned member is here. Please don't get excited. I can understand if any one of your well-wisher is afffected, there is every reason to feel so.

+ಶ್ರೀ ಶ್ಯಾಮನೂರು ಶಿವಶಂಕರಪ್ಪ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ರಾತ್ರಿ ಕೆ.ಇ.ಬಿ. ಯವರು ನಮ್ಮ ಉದ್ಯಮಗಳ ಮೇಲೆ ಧಾಳಿ ನಡೆಸಿದ್ದಾರೆನ್ನುವುದು ನನ್ನ ಗಮನಕ್ಕೆ ಬಂದಿದೆ. ನಾವು ಸುಮಾರು ಐವತ್ತು ವರ್ಷಗಳಿಂದ ಈ ಉದ್ಯಮಗಳ ವ್ಯವಹಾರದಲ್ಲಿ ತೊಡಗಿಕೊಂಡು ಬಂದಿದ್ದೇವೆ. ಇಷ್ಟು ವರ್ಷಗಳಲ್ಲಿ ಎಲ್ಲಿಯೂ ಕೂಡ ನಮ್ಮ ಬಗ್ಗೆ ಕಪ್ಪು ಚುಕ್ಕೆ ಇಲ್ಲ. ಆದರೆ,. ನಿನ್ನೆ ದಿವಸ ರಾತ್ರಿ 15 ಜೀಪುಗಳಲ್ಲಿ 40-50 ಜನರು, ಇವರಲ್ಲಿ ಧಾರವಾಡದಿಂದ ಸ್ವಲ್ಪ ಜನ ಹಾಗೂ ಬೆಂಗಳೂರಿನಿಂದ ಸ್ವಲ್ಪ

ಜನರು ಬಂದು ಏಕಕಾಲಕ್ಕೆ ದಾವಣಗೆರೆಯಲ್ಲಿರುವ ನಮ್ಮ ಎಲ್ಲಾ ಉದ್ಯಮಗಳ ಮೇಲೆ ಧಾಳಿ ಮಾಡಿದ್ದಾರೆ. ದಾವಣಗೆರೆಯಲ್ಲಿ ನೂರಾರು, ಸಾವಿರಾರು ಕೈಗಾರಿಕೆಗಳಿರುವುದು ಧಾಳಿ ನಡೆಸಿದವರ್ಯಾರ ಗಮನಕ್ಕೂ ಬರಲಿಲ್ಲವೇ? ಧಾಳಿ ನಡೆಸುವುದಾಗಿದ್ದರೆ ಎಲ್ಲಾ ಕೈಗಾರಿಕೆಗಳ ಮೇಲೂ ನಡೆಸಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ಆದರೆ, ಎಲ್ಲಾ ಕೈಗಾರಿಕೆಗಳ ಮೇಲೆ ಧಾಳಿ ನಡೆಸಲಿಲ್ಲ. ಏಕೆಂದರೆ ದಾವಣಗೆರೆಯಲ್ಲಿ, ಅತಿ ಹೆಚ್ಚಿನ ಸೇಲ್ಸ್ ಟ್ಯಾಕ್ಸ್ ಆಗಲೀ, ಕಮರ್ಶಿಯಲ್ ಟ್ಯಾಕ್ಸ್ ಆಗಲೀ, ಇನ್‌ಕಮ್ ಟ್ಯಾಕ್ಸ್ ಆಗಲೀ ಕೋಟಿಗಟ್ಟಲೆ ಸರ್ಕಾರಕ್ಕೆ ಇನ್‌ಕಮ್ ಕೊಡತಕ್ಕಂಥ ಉದ್ಯಮಗಳನ್ನು ನಾವು ನಡೆಸುತ್ತಿದ್ದೇವೆ. ನಾವು ಚಿಲ್ಲರೆ ಬದುಕು ನಡೆಸಲು ಹೋಗಬೇಕಾದರೂ ಯೋಚಿಸಬೇಕಾಗುತ್ತದೆ. ಈ ಸಂಬಂಧಿತವಾದ ಇಲಾಖೆ ನೇರವಾಗಿ ಮುಖ್ಯಮಂತ್ರಿಗಳ ಕೈಯಲ್ಲಿರುವುದರಿಂದ ಅವರ ಗಮನಕ್ಕೆ ಬಾರದೆ ನಮ್ಮ ಉದ್ಯಮಗಳ ಮೇಲೆ ಧಾಳಿ ನಡೆಸಿರಲು ಸಾಧ್ಯವಿಲ್ಲ. ಇದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ? ಇದರ ಬಗ್ಗೆ ಸದನಕ್ಕೆ ತಿಳಿಸಿರಿ.. ಮಾನ್ಯ ಅಧ್ಯಕ್ಷರೆ, ತಾವು ಈಗ ಮಾತನಾಡುತ್ತಾ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆ ಕೆಲವರು ಸೂಪರ್ ಚೀಫ್ ಮಿನಿಸ್ಟರ್ ಇರುತ್ತಾರೆಂದು ಹೇಳಿದಿರಲ್ಲ, ಆ ರೀತಿಯಾಗಿ ಆಗಿದೆಯೋ? ಅಥವಾ ಇನ್ನಿತರ ಕಾರಣಗಳಿಂದ ಆಗಿರಬಹುದೇ? ಇಲ್ಲವೇ ಸದನದಲ್ಲಿರುವ ಬೇರೆ ಸದಸ್ಯರುಗಳಿಗೆ ಇದರ ಚುರುಕು ಮುಟ್ಟಿಸಬೇಕೆಂಬ ಅಭಿಪ್ರಾಯ ಇದ್ದರೂ ಇರಬಹುದು. ಅಥವಾ ನಾನು ಈಗ ಕಾಂಗ್ರೆಸ್ ಎಂ.ಎಲ್.ಎ ಆಗಿದ್ದು, ಕೆ.ಪಿ.ಸಿ.ಸಿ.ಯ ಖಿಜಾಂಚಿಯಾಗಿದ್ದೇನೆ. ಆದರೂ ಕೂಡ ನನಗೆ ಅವರು ಸುಮಾರು ನಲವತ್ತು ವರ್ಷಗಳಿಂದ ಪರಿಚಿತರಾಗಿದ್ದರಲ್ಲದೆ ಸ್ನೇಹಿತರಾಗಿದ್ದರು. ಆದರೆ, ಈಗ್ಗೆ ಹದಿನೈದು ದಿವಸಗಳಿಂದ ನನಗೂ ಅವರಿಗೂ ಸ್ವಲ್ಪ ವ್ಯತ್ಯಾಸ ಬಂದಿದ್ದು ಇದನ್ನು ನಾನು ಅವರ ಗಮನಕ್ಕೆ ತಂದಿದ್ದೇನೆ. ಇದರಲ್ಲಿ ನಾನು ಸಫಲ ಆಗಲಿಲ್ಲವಾದರೂ ಮುಂದೆ ಇದರ ಬಗ್ಗೆ ಮಾತನಾಡುವುದು ಬೇಡವೆಂದು ತಿಳಿದು ಇದುವರೆವಿಗೂ ಪ್ರಸ್ತಾಪಿಸಲಿಲ್ಲ. ಈಗ ಅವರ ಸರ್ಕಾರ ಕೂಡ ಸ್ವಲ್ಪ ಅಭದ್ರತೆಯಲ್ಲಿರುವುದರಿಂದ ಎಚ್ಚರಿಕೆ ಕೊಡುವುದಕ್ಕೆ ಈ ರೀತಿ ಮಾಡಿದ್ದಾರೇನೋ ಎಂದು ನನಗರ್ಥವಾಗುತ್ತಿಲ್ಲಾ. ಆದರೆ ನಾವು ಮಾತ್ರ ಸರ್ಕಾರ ಟ್ಯಾಕ್ಸ್‌ಗಳನ್ನು ಏನು ನಿಗದಿ ಮಾಡಿದೆಯೋ ಅದನ್ನು ತಪ್ಪದೆ ಯಾವಾಗಲೂ ಕೂಡ We are not at all defaulters in our lives. ಅಂಥ ಪರಿಸ್ಥಿತಿಯಲ್ಲಿ ನಾವು ನಡೆಸಿಕೊಂಡು ಬರುತ್ತಿರಬೇಕಾದರರೆ ಈ ರೀತಿ ಏಕಾಯಿತು ಎಂದು ನನಗೆ ಗೊತ್ತಿಲ್ಲ. ಆದರೆ ಇದರಿಂದ ಸರ್ಕಾರಕ್ಕೂ ಕೂಡ ಏನು ಸಾಧಿಸುವುದಕ್ಕೆ ಆಗುವುದಿಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ನಾವು ನಮ್ಮ ಅಧ್ಯಕ್ಷರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇವೆ. ಈ ಬಗ್ಗೆ ವೈಯಕ್ತಿಕ ದ್ವೇಷದಿಂದ ಮಾಡುವುದು ಬೇಡ ಎನ್ನುವ ಅಭಿಪ್ರಾಯವನ್ನು ನಮ್ಮ ನಾಯಕರು ಮತ್ತು ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ ಆದುದರಿಂದ ನನ್ನ ಅಭಿಪ್ರಾಯದಲ್ಲಿ ಇದು ಎಲ್ಲರಿಗೂ ಸ್ವಲ್ಪ ಚುರುಕು ಮುಟ್ಟಿಸೋಣ ಎನ್ನತಕ್ಕಂತಹ ಅಭಿಪ್ರಾಯ ಇದ್ದರೂ ಇರಬಹುದು ಎಂಬ ಮಾತನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇದರಲ್ಲಿ ಯಾವುದೇ ರೀತಿಯ ರಾಜಕೀಯ ಕಿರುಕುಳ ಬರಲಿ, ಏನಾದರೂ ಬರಲಿ, ಕಾನೂನು ಬಿಟ್ಟು ಹೋಗುವಂತಹ ಜನ ನಾವಲ್ಲ. ಮತ್ತು ಯಾವುದೇ ರೀತಿಯ ಸಮಸ್ಯೆ ಬಂದರೂ ನಾವು ಹೋರಾಡುವುದಕ್ಕೆ ಸಿದ್ಧರಿದ್ದೇವೆ ಎಂದು ನಾನು ಸದನಕ್ಕೆ ತಿಳಿಸುತ್ತೇನೆ.

ಅಧ್ಯಕ್ಷರು : ಸೂಪರ್ ಚೀಫ್ ಮಿನಿಸ್ಟರ್ ಇದ್ದಾರೆ ಎಂದು ನಾನು ಹೇಳಿರುವ ಮಾತನ್ನು ಆ ರೀತಿ ಇದ್ದಾರೆ ಎಂದು ಪತ್ರಿಕೆಯವರು ವರದಿ ಮಾಡಿದರೆ ಆ ರೀತಿಯ ಅಭಿಪ್ರಾಯ ಬರುವುದು ಬೇಡ. ಸಾಮಾನ್ಯವಾಗಿ ಅಧಿಕಾರ ಎಲ್ಲಿ ಇರುತ್ತದೆ ಅಲ್ಲಿ ತಮ್ಮಷ್ಟಕ್ಕೆ ತಾವೇ they assert that capacity themselves. You cannot help it. ಒಂದು ವೇಳೆ ಅಂತಹವರು ಯಾರಾದರೂ ಇವರ ಗಮನಕ್ಕೆ ಬರದೇ ಇದ್ದಿದ್ದರೆ, ಅದು ಕೂಡ he will take care of it ಎಂಬ ಮಾತನ್ನು ಹೇಳಿದ್ದಾರೆ. Let not a different type of meaning convey it.

ಶ್ರೀ ಜೆ.ಹೆಚ್. ಪಟೇಲ್: ಬೇರೆ ಉದ್ಯಮಗಳಿಗೆ ನಾವು ಏನು ಕನ್‌ಸೆಷನ್ ಕೊಡುತ್ತೇವೆ, ಬೇಕಾದ್ದು ಮಾಡುತ್ತೇವೆ ಎನ್ನತಕ್ಕಂಥದ್ದು ಸರಿಯಲ್ಲ ಅವರದು ಒಂದೇ ಉದ್ಯಮದ ಬಗ್ಗೆ ನಮ್ಮ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದರೆ ತಪ್ಪು. ತಪ್ಪು ಮಾಡಿದ ಮೇಲೆ ಎಲ್ಲರಿಗೂ ತನಿಖೆ ಆಗಬೇಕು. ತಪ್ಪು ಮಾಡಿದ ಎಲ್ಲರೂ ದಂಡ ಕಟ್ಟಬೇಕು ಅಲ್ಲದೆ ಈ ವಿಷಯ ನನಗೆ ಈಗ ತಿಳಿಯಿತು. ಕೆಇಬಿ ಆಫೀಸರ್, ಲೋಕಲ್ ಸೂಪರಿಂಟೆಂಡೆಂಟ್ ಇಂಜಿನಿಯರ್, ಚೀಫ್ ಇಂಜಿನಿಯರ್ ಅವರು ಬಹುಶಃ ಮಧ್ಯಾಹ್ನ ಬಂದು ತಿಳಿಸಬಹುದು. ಏಕೆಂದರೆ, ನಿನ್ನೆ ಇದು ಆಪರೇಷನ್ ಆಗಿರುವುದು ಈ ಮಾತನ್ನು ಅವರೇ ಹೇಳಿದರು. ಮಾನ್ಯ ಅಧ್ಯಕ್ಷರೆ, ಈ ವಿರೋಧ ಪಕ್ಷದ ನಾಯಕರು ನಮಗೆ ಏನು ಇವರು ಡೈರೆಕ್ಷನ್ ಕೊಡುವುದು? ಹೇಳಬಾರದ ಮಾತುಗಳನ್ನು ಹೇಳುವುದು ಸ್ವಾಮಿ, ಇದು ತೀರಾ ಬ್ರೇಕಿಂಗ್ ಪಾಯಿಂಟ್‌ಗೆ ಹೋಗಬಾರದು. ದಯವಿಟ್ಟು ಅವರು, ನಾನು ಹೇಗೆ ಮಾತನಾಡುತ್ತೇವೆ ಹಾಗೆ ಅವರು ಮಾತನಾಡಲಿ ಬೇಕಾದರೆ, ಸರ್ಕಾರಕ್ಕೆ ಹೇಗೆ ಹೇಳಬೇಕೋ ಆರೀತಿ ಹೇಳಲಿ, ಆದರೆ ಈ ರೀತಿ ಮಾತನಾಡುವುದು ಸರಿಯಲ್ಲ.

MR SPEAKER : All right, we will close it at that.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಹೇಳಬಾರದಂತಹ ಮಾತನ್ನು ಏನೂ ಹೇಳಲಿಲ್ಲ. ತಮ್ಮಿಂದ ಡೈರೆಕ್ಷನ್ ಹೋಗಿದೆ ಎಂದರೆ ತಪ್ಪೇ? ನೀವು ಹೇಳಿಲ್ಲ, ಆದರೆ ಬೇರೆಯವರು ಹೇಳಿರುವುದು ತಪ್ಪೇ? ಯಾರ್ಯಾರು ನಮಗೆ ಫೋನ್ ಮಾಡಿದ್ದಾರೆ ಏನೇನು ಹೇಳಿದ್ದಾರೆ ಎನ್ನುವುದನ್ನೂ ಸಹ ಹೇಳುತ್ತೇನೆ. ಆದರೆ ತಾವು ದಯವಿಟ್ಟು ಬೇರೆಯವರಿಗೆ ಗೊತ್ತಿಲ್ಲ ಎಂದು ತಿಳಿದುಕೊಳ್ಳಬಾರದು. ನಾನು ಮಾತನಾಡುವ ರೀತಿಯೇ ಹೀಗೆ, ದಯವಿಟ್ಟು ತಾವು ತಪ್ಪು ಮಾಡಿದ್ದರೆ ಅದನ್ನು ತಿದ್ದಿಕೊಳ್ಳಿ, ಮತ್ತೆ ಆ ರೀತಿ ಮಾಡುವುದಕ್ಕೆ ಹೋಗಬೇಡಿ

ಹುಡಗುಣಿ, ತಾಳಗುಂದ ತಡೆಗಣ್ಣಿನಲ್ಲಿ ಹಾಲು ಶೀತಲೀ ಕೇಂದ್ರದ ಸ್ಥಾಪನೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಇಲ್ಲಿ ಸಚಿವರಾದಂತಹ ಶ್ರೀ ರೇವಣನವರು ಇದ್ದಾರೆ, ಮುಖ್ಯಮಂತ್ರಿಗಳು ಇದ್ದಾರೆ. ಆದುದರಿಂದ ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆ. ಇದು ಬಹಳ ಪ್ರಮುಖವಾಂದಂಥದ್ದು ಅಲ್ಲ. ಆದರೆ ಕ್ಷೇತ್ರದ ದೃಷ್ಟಿಯಿಂದ ಮಾತನಾಡುತ್ತೇನೆ. ಹಿಂದೆ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ತಡಗಣ್ಣಿನಲ್ಲಿ ಹಾಲು ಶಿತಲೀಕೇಂದ್ರವು 10 ವರ್ಷಗಳ